ಓ.ಎಸ್.ನಂ.172/2018

ಪಿ.ಡಬ್ಲ್ಯೂ:2

**ದಿನಾಂಕಃ16.03.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಎಸ್.ಪಿ.ವಕೀಲರಿಂದಃ**

ನಾರಾಯಣಶೆಟ್ಟಿ ಮತ್ತು ಮೂರ್ತಿ ಅವರು ಈ ದಾವೆಯನ್ನು ತಿಮ್ಮಶೆಟ್ಟಿ ಮತ್ತು ಪುಟ್ಟಸ್ವಾಮಿ ರವರ ಕುಟುಂಬದ ವಿರುದ್ಧ ದಾಖಲು ಮಾಡಿರುತ್ತಾರೆ. ನಾರಾಯಣಶೆಟ್ಟಿ ಯೊಂದಿಗೆ 5 ಜನ ಅಣ್ಣ-ತಮ್ಮಂದಿರು ಇದ್ದಾರೆ, ಅಕ್ಕ-ತಂಗಿಯರು ಗೊತ್ತಿಲ್ಲ. ಮೂರ್ತಿ ಎಂಬುವವರ ತಂದೆ ಹೆಸರು ಗೊತ್ತಿಲ್ಲ. ನಾನು ಕಡೂರಿನಲ್ಲಿ ಟಮೋಟೋ ಮಂಡಿ ನಡೆಸುತ್ತಿದ್ದೇನೆ ಅಂದರೆ ಸರಿ. ನೀವು ಕಡೂರಿನಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದೀರಿ ಅಂದರೆ, ಸಾಕ್ಷಿಯು ಮೊದಲು ವಾಸವಾಗಿದ್ದೆವು, ಈಗ ಕಳೆದ 5 ವರ್ಷಗಳಿಂದ ಊರಿನಲ್ಲಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನಾರಾಯಣಶೆಟ್ಟಿ ಅವರ ತಂದೆ ಹೆಸರು ಹನುಮಂತಶೆಟ್ಟಿ. ಹನುಮಂತಶೆಟ್ಟಿ ಅವರು ಬಹಳ ಹಿಂದೆಯೇ ನಾನು ಹುಟ್ಟುವ ಮೊದಲೇ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ದಿನಾಂಕ ಗೊತ್ತಿಲ್ಲ. ಹನಮಂತಶೆಟ್ಟಿ ಅವರು ಆಸ್ತಿಯನ್ನು ಶುದ್ಧಕ್ರಯಕ್ಕೆ ಪಡೆದಿರುವ ವಿಚಾರ ಗೊತ್ತು. 5 ನೇ ವಾದಿ ನಾರಾಯಣಶೆಟ್ಟಿ ಅವರಿಗೆ ಶಾರದಮ್ಮ ಎಂಬ ಸಹೋದರಿ ಇದ್ದಾರೆ ಅಂದರೆ ಗೊತ್ತಿಲ್ಲ. ದಾವೆಯನ್ನು ಸರ್ವೇನಂಬರ್.75 ರಲ್ಲಿ 34 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲು ಮಾಡಲಾಗಿರುತ್ತದೆ. ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃಲಕ್ಷ್ಮಿರಂಗಶೆಟ್ಟಿ, ಪಶ್ಚಿಮಕ್ಕೆಃಸೀತಮ್ಮ, ಉತ್ತರಕ್ಕೆಃಶಂಕರಶೆಟ್ಟಿಯವರ ಜಮೀನು ಮತ್ತು ದಕ್ಷಿಣಕ್ಕೆ ಯಾರ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಾರಾಯಣಶೆಟ್ಟಿ ನಾನು ಹತ್ತಿರದ ಸಂಬಂಧಿ ಅಂದರೆ ಸರಿಯಲ್ಲ, ಆದರೆ ಒಂದೇ ಊರಿನವರು, ನಾನು ಮತ್ತು ನಾರಾಯಣಶೆಟ್ಟಿ ಅವರು ಸ್ನೇಹಿತರು ಅಂದರೆ ಸರಿ. ಸದರಿ ನಾರಾಯಣಶೆಟ್ಟಿ ಅವರು ಕಂಡಕ್ಟರ್ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ಸದರಿ ನಾರಾಯಣಶೆಟ್ಟಿ ನಿವೃತ್ತಿಯಾದ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಅಂದರೆ, ಸಾಕ್ಷಿಯು ಅವರ ಹೆಂಡತಿ ಮಕ್ಕಳು ಬೆಂಗಳೂರಿನಲ್ಲಿ ವಾಸವಾಗಿದ್ದು, ನಾರಾಯಣಶೆಟ್ಟಿ ಅವರು ಊರಿನಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಸದರಿ ನಾರಾಯಣಶೆಟ್ಟಿ ರವರು ಕೆಲಸದ ಮೇಲೆ ಹೊರಗಡೆ

ಇದ್ದಾಗ ಅವರ ಭಾವ ರಂಗಶೆಟ್ಟಿ ಅವರ ಜಮೀನುಗಳನ್ನು ನೋಡಿಕೊಳ್ಳುತ್ತಾರೆ ಅಂದರೆ ಸರಿ.

ದಾವಾ ಆಸ್ತಿಯ ಸಮೀಪದಲ್ಲಿ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಯಾರು ಯಾರಿಗೆ ಜಗಳವಾಯಿತು ಎಂದು ನಾನು ನೋಡಿರುವುದಿಲ್ಲ. ತುಂಬಾ ಹಿಂದೆಯೇ ವಾದಿಗಳು ಮತ್ತು ಪ್ರತಿವಾದಿಗಳ ತಂದೆಯರ ನಡುವೆ ಆಸ್ತಿಗಳು ವಿಭಾಗವಾಗಿದ್ದರೂ ಸಹ ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರಃದಃನ್ಯಾಃದಂ.,ರವರು,
ಕಡೂರು.